Suresh Angadi Education Foundation's

# Angadi International School

(Affiliated CBSE, New Delhi)

**GRADE : V** **WORK SHEET**

## ಗಾದೆ ಮಾತು

### ಕೈ ಕೆಸರಾದರೆ ಬಾಯಿ ಮೊಸರು

ಜನಪ್ರಿಯ ಗಾದೆಗಳಲ್ಲಿ ಇದು ಒಂದು. ವೇದ ಸುಳ್ಳಾದರು ಗಾದೆ ಸುಳ್ಳಾಗದು ಎಂಬ ಮಾತಿದೆ, ಗಾದೆ ಮಾತುಗಳು ಹಿರಿಯರ ಅನುಭವದಿಂದ ಬಂದ ನುಡಿಮುತ್ತುಗಳು ಈ ಗಾದೆ ಮಾತು ದುಡಿಮೆ ಅಥವಾ ದೈಹಿಕ ಶ್ರಮದ ಬಗ್ಗೆ ತಿಳಿಸುತ್ತದೆ.

12ನೇ ಶತಮಾನದಲ್ಲಿ ವಚನಕಾರರು ಕಾಯಕದ ಮಹತ್ವವನ್ನು ತಿಳಿಸಿದ್ದಾರೆ. ಇಲ್ಲಿ ಪ್ರತಿಯೊಬ್ಬರು ಸೋಮಾರಿಯಾಗಿ ಕಾಲ ಕಳೆಯದೆ ಕಷ್ಟಪಟ್ಟು ದುಡಿದು ಬದುಕುವುದರಿಂದ ಹಣ ಸಂಪಾದನೆ ಸಾಧ್ಯ. ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು ಎಂಬಂತೆ ಆಸ್ತಿ ಕರಗಿದ ಮೇಲೆ ಕಷ್ಟ ಪಡಬೇಕಾಗುತ್ತದೆ ಕಷ್ಟ ಪಟ್ಟರೆ ಸುಖವಿದೆ ಎಂಬುದು ಈ ಗಾದೆ ಮಾತಿನ ಆಶಯವಾಗಿದೆ.

### ಮಾತೇ ಮೃತ್ಯು ಮಾತೇ ಮುತ್ತು

ಇದು ಜನಪ್ರಿಯ  ಗಾದೆ ಮಾತಾಗಿದೆ. ವೇದ ಸುಳ್ಳಾದರು ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆ ಮಾತುಗಳು ಹಿರಿಯರ ಅನುಭವದಿಂದ ಬಂದ ನುಡಿಮುತ್ತುಗಳು ಈ ಗಾದೆ ಮಾತು, ನಮ್ಮ ಮಾತುಗಳು ಹೇಗಿರಬೇಕು ಎಂದು ಹೇಳುತ್ತದೆ.

ಮಾನವ ಮಾತನಾಡುವಾಗ ವಿಚಾರ ಶಕ್ತಿಯನ್ನು ಹೊಂದಿದ್ದಾನೆ. ನಮ್ಮ ಮಾತುಗಳು ಒರಟಾಗಿರದೆ ಎಲ್ಲರೊಂದಿಗೆ ಹಿತವಾಗಿ ಮಾತನಾಡಬೇಕು. ಬಸವಣ್ಣ ಹೇಳಿದಂತೆ ನುಡಿದರೆ ಮುತ್ತಿನ ಹಾರದಂತಿರಬೇಕು ಅಂದರೆ ನಮ್ಮ ಮಾತುಗಳು ಇತರರಿಗೆ ನೋವನ್ನುಂಟು ಮಾಡಬಾರದು ಹಿತಮಿತವಾಗಿರಬೇಕು ಎಂಬುದು ಈ ಗಾದೆ ಮಾತಿನ ಆಶಯವಾಗಿದೆ.